

ಅಭಿಮಾನಿಗಳ ಬಳಗವಿದೆ. ಉತ್ತರ ಭಾರತದಲ್ಲಿ ಅಕ್ಷಯ್ ಕುಮಾರ್ ಚಿತ್ರಗಳನ್ನು ಮುಗಿಬಿದ್ದು ನೋಡುವವರ ಸಂಖ್ಯೆ ಹೆಚ್ಚು. ಮೇಲಾಗಿ ಉಳಿದ ಸ್ಟಾರ್ ನಟರಿಗೆ ಹೋಲಿಸಿದರೆ ಅಕ್ಷಯ್ ಆರ್ಥಿಕವಾಗಿ ಜಾಣ. 'ಪ್ಯಾಡ್‌ಮನ್', 'ಟಾಯ್ಲೆಟ್–ಏಕ್ ಪ್ರೇಮ್ ಕಥಾ' ತರಹದ ಹಿಂದಿ ಸಿನಿಮಾಗಳು ಸರ್ಕಾರದ ಮುಖವಾಣಿಗಳಾಗಿಯೇ ತೆರೆಕಂಡಿದ್ದವು. ಅವು ಯಶಸ್ವಿಯಾಗಿ, ಹಣವನ್ನೂ ಮಾಡಿದ್ದವು. ಹೀಗಾಗಿ ಶಂಕರ್ ಇಡೀ ಸಿನಿಮಾ ಯೋಜನೆಯನ್ನು 'ಮೇಕ್–ಇನ್–ಇಂಡಿಯಾ' ಆಗಿ ಬಿಂಬಿಸಿಕೊಂಡರು. ದೇಸಿ ತಂತ್ರಜ್ಞರು, ದೇಸಿ ನಟ–ನಟಿಯರು ಎನ್ನುವುದನ್ನೇ ಪ್ರಚಾರದ ತಂತ್ರವನ್ನಾಗಿಸಿಕೊಂಡರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ರಜನಿ ಭೇಟಿ ಮಾಡಿದ್ದು, ಈ ಸಿನಿಮಾದ ಕುರಿತೂ ಚರ್ಚೆ ನಡೆಸಿದ್ದಾರೆ ಎಂಬ ಸುದ್ದಿ ಪ್ರಕಟವಾಗುವಷ್ಟರ ಮಟ್ಟಿಗೆ ಶಂಕರ್ ಮಾರುಕಟ್ಟೆಯ ಜಾಣತನ ಅನಾವರಣಗೊಂಡಿತ್ತು. '2.0' ಸಿನಿಮಾ ಚಿತ್ರಿತವಾದದ್ದು ದೆಹಲಿ ಹಾಗೂ ಚೆನ್ನೈನ ಇವಿಪಿ ಫಿಲ್ಮ್ ಸಿಟಿಯಲ್ಲಿ. ಕ್ಲೈಮ್ಯಾಕ್ಸ್ ಚಿತ್ರೀಕರಿಸಿದ್ದು ದೆಹಲಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ. ಅಕ್ಷಯ್ ಕುಮಾರ್ ಹಾಗೂ ರಜನೀಕಾಂತ್ ನಡುವಿನ ಸಾಹಸದ ದೃಶ್ಯಗಳನ್ನು ಅನಿಮ್ಯಾಟ್ರಾನಿಕ್ಸ್ ತಂತ್ರಜ್ಞಾನ ಹಾಗೂ ಹೆಲಿಕ್ಯಾಮ್‌ಗಳನ್ನು ಬಳಸಿ ಚಿತ್ರೀಕರಿಸಿರುವುದು ವಿಶೇಷ.

ಹಾಲಿವುಡ್‌ನ 25 ವಿಎಫ್‌ಎಕ್ಸ್ ಸ್ಟುಡಿಯೊಗಳು '2.0' ಸಿನಿಮಾದ ದೃಶ್ಯ ವೈಭವಕ್ಕಾಗಿ ಕೆಲಸ ಮಾಡಿವೆ. ಆ ಪೈಕಿ ಲಾಸ್ ಏಂಜಲೀಸ್‌ನ ಟಿಎಯು ಫಿಲ್ಮ್ ಕೂಡ ಒಂದು. ಅದರ ಮುಖ್ಯಸ್ಥ ವಾಲ್ಟ್ ಜೋನ್ಸ್ ಈ ಸಿನಿಮಾದ ಅನುಭವದ ಬಗೆಗೆ ಹೇಳಿಕೊಂಡಿರುವುದಿಷ್ಟು: 'ಮೊದಲಿಗೆ ಶಂಕರ್ ಚಿತ್ರಕಥೆ ಬರೆದಿಟ್ಟಿದ್ದರು. ಅದರಲ್ಲಿ ಪದಗಳಷ್ಟೇ ಇದ್ದವು. ದೃಶ್ಯವತ್ತಾಗಿ ಅವು ಹೇಗೆ ರೂಪುಗೊಳ್ಳಬೇಕು ಎನ್ನುವ ಸ್ಪಷ್ಟತೆ ಇರಲಿಲ್ಲ. ಚಿತ್ರೀಕರಣ ಶುರುವಾಗುವ ಆರು ತಿಂಗಳು ಮೊದಲೇ ನಮ್ಮನ್ನೆಲ್ಲ ಚರ್ಚೆಗೆ ಕರೆದರು. ಆಗಲೇ ಒನ್‌ಲೈನರ್ ಕೇಳಿ ಇದೊಂದು ಸವಾಲಿನ ಕೆಲಸ ಎನಿಸಿತ್ತು. ಸಿನಿಮಾ ಸಿದ್ಧಗೊಂಡ ಮೇಲೆ ನಾವು ಮಾಡಿದ ಕೆಲಸದ ಕುರಿತು ಹೆಮ್ಮೆ ಮೂಡಿತು. ರಜನೀಕಾಂತ್ ಸಜ್ಜನ, ತಮಾಷೆಯ ಮನುಷ್ಯ. ಅದಕ್ಕೇ ಅವರು ಹೃದಯವಂತರು. ಅಕ್ಷಯ್ ಕುಮಾರ್ ಜತೆ ಇದೇ ಮೊದಲ ಸಲ ನಾವು ಕೆಲಸ ಮಾಡಿದ್ದು. ಅವರಿಗೂ ಔಚಿತ್ಯ ಪ್ರಜ್ಞೆ ಇದೆ.'

2015ರ ಡಿಸೆಂಬರ್‌ನಲ್ಲಿ '2.0' ಚಿತ್ರೀಕರಣ ಪ್ರಾರಂಭವಾದದ್ದು. ಪೂರ್ಣವಾಗಿ ಮುಗಿದದ್ದು 2017ರ ಅಕ್ಟೋಬರ್‌ನಲ್ಲಿ. ಅಲ್ಲಿಂದಾಚೆಗಿನದು ಚಿತ್ರೀಕರಣೋತ್ತರ ಕೆಲಸ. ದೀಪಾವಳಿ ಹೊತ್ತಿಗೆ ತೆರೆಕಾಣಬೇಕಿದ್ದ ಸಿನಿಮಾ ಒಂದು ತಿಂಗಳು ತಡವಾಗಿ ಬಿಡುಗಡೆಯಾಯಿತಷ್ಟೆ. ಟೀಸರ್ ಬಿಡುಗಡೆಯದ್ದೇ ದೊಡ್ಡ ಸಮಾರಂಭ ಮಾಡಿದ ಶಂಕರ್, ಸಿನಿಮಾದ ಪ್ರಚಾರದ ವಿನ್ಯಾಸವನ್ನೂ ಮಾರುಕಟ್ಟೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮಾಡಿದರು.

ಸಿನಿಮಾದ ಕೊನೆಯ ಅರ್ಧ ಗಂಟೆ ತೆರೆತುಂಬ ವಿಎಫ್‌ಎಕ್ಸ್‌ನ ಬೃಹತ್ ವೈಭವ. ಚಿಟ್ಟಿಯ ಮಿನಿಯೇಚರ್ 'ಕುಟ್ಟಿ'ಗಳನ್ನು ನೋಡುವ ಅವಕಾಶ. ಅಸಂಖ್ಯ ಬಿಳಿಹಕ್ಕಿಗಳ ಮೇಲೆ ಕುಳಿತ ಪುಟಾಣಿ ರಜನಿಗಳನ್ನು ತುಂಟಾಟಗಳ ಸಮೇತ ನೋಡಬಹುದು. ಈ ಅರ್ಧ ಗಂಟೆಗೆ ಇರುವ ರಂಜನೆಯ ಗುಣ ಚಿತ್ರದ ಬಹುಭಾಗಗಳಿಗೆ ಇದ್ದಿದ್ದರೆ 'ಎಂದಿರನ್'ಗೆ ಇದ್ದಂಥ ವೇಗವೇ ಇದಕ್ಕೂ ದಕ್ಕುತ್ತಿತ್ತು. ಮಿದುಳನ್ನು ಹೆಚ್ಚು ಖರ್ಚು ಮಾಡಿ, ಹೃದಯದ ಕೆಲಸವನ್ನು ತಗ್ಗಿಸಿದಾಗ ಏನಾಗುವುದೋ '2.0' ಸಿನಿಮಾಗೂ ಅದೇ ಆಗಿದೆ. ಆದರೆ, ಅಲ್ಲಿ ರಸೂಲ್ ಪೂಕುಟ್ಟಿ ಧ್ವನಿಯ ಎಂಜಿನಿಯರಿಂಗ್, ಶ್ರೀನಿವಾಸ ಮೋಹನ್ ದೃಶ್ಯಾವತಾರಗಳು, ಆಂಟನಿ ಸಂಕಲನದ ಕುಶಲತೆಯನ್ನು ನಾವು ಗುರುತಿಸಲೇಬೇಕು.

ಸಿನಿಮೀಯ ತರ್ಕವನ್ನು ಇಟ್ಟು, ಮಕ್ಕಳಿಂದ ವೃದ್ಧರವರೆಗೆ ಎಲ್ಲರನ್ನೂ ಕೂರಿಸಿಕೊಳ್ಳಬಲ್ಲ ತಾಕತ್ತಂತೂ ಈ ಸಿನಿಮಾಗೆ ಇದೆ. ಈ ದೃಷ್ಟಿಯಿಂದ ಇಡೀ ಸಿನಿಮಾವನ್ನು 'ದೇಸಿ ವಿಎಫ್‌ಎಕ್ಸ್ ವೈಭವ'ದ ಉದಾಹರಣೆ ಎನ್ನಲಡ್ಡಿಯಿಲ್ಲ.

■


ನಂ.1 ವಶೀಕರಣ ಮೋಡಿಗಾರರು – ದೈವಜ್ಞ ಪಂ. ಸಾಯಿದೀಕ್ಷಿತ್ ಗುರೂಜಿ – 9980174116



ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮೋಡಿಗಾರರು

ಚಿಂತಿಸುವ ಅವಶ್ಯಕತೆ ಇಲ್ಲ. ಒಂದು ಫೋನ್‌ಕಾಲಿನಿಂದ ನಿಮ್ಮ ಜೀವನ ಬದಲಾಗುತ್ತದೆ. ಇವರು ನಿಮ್ಮ ನಗರದಲ್ಲಿ ಖಾಯಂ ಆಗಿ ನೆಲೆಸಿದ್ದಾರೆ.

ವಿ. ಸೂಚನೆ: ವಶೀಕರಣ ಸ್ಪೆಷಲಿಸ್ಟ್, ಸ್ತ್ರೀ ವಶೀಕರಣ ಪುರುಷ ವಶೀಕರಣ, ಮಾಟಮಂತ್ರ, ವಿದೇಶ ಪ್ರಯಾಣ, ಲೈಂಗಿಕ ಸಮಸ್ಯೆ, ಶತ್ರುಗಳ ನಾಶ ಹಾಗೂ ಹಲವಾರು ಸಮಸ್ಯೆಗಳಿಗೆ ಅಷ್ಟದಿಗ್ಬಂಧನ ಶಕ್ತಿ ತಾಂತ್ರಿಕ, ಮಾಂತ್ರಿಕ ಶಕ್ತಿ ಹಾಗೂ ಸರ್ವ ದೈವ ಶಕ್ತಿಗಳ ಮೂಲಕ ಕೇವಲ 5 ದಿನಗಳಲ್ಲಿ ಪರಿಹಾರ ಶತಃಸ್ಸಿದ್ಧ.

ಸ್ತ್ರೀ ಪುರುಷ ವಶೀಕರಣಕ್ಕೆ, ಅಷ್ಟದಿಗ್ಬಂಧನ ಶಕ್ತಿಯಿಂದ ಬಗೆಹರಿಸಲಾಗುವುದು

ನೀವು ಇಷ್ಟ ಪಟ್ಟವರು ನಿಮ್ಮಂತೆ ಆಗಲು ಯಾರಿಂದಲೂ ಆಗದ ಕೆಲಸ ಕೆಲವೇ ಘಂಟೆಗಳಲ್ಲಿ ಸಾಧ್ಯ. ನಿಗೂಢ ಗುಪ್ತ ಸಮಸ್ಯೆಗಳೇನೇ ಇರಲಿ ತಕ್ಷಣದಲ್ಲಿ ಪರಿಹಾರ ಸೂಚಿಸುತ್ತಾರೆ.

ಸಮಸ್ಯೆಯನ್ನು ನೋಡಿ ಕರುಣೆ ತೋರಿಸುವುದು ಮನುಷ್ಯತ್ವ. ಅದೇ ಸಮಸ್ಯೆಗೆ ಪರಿಹಾರ ನೀಡುವುದು ದೈವತ್ವ...

ಸಮಸ್ಯೆಗಳಿಗೆ ಫೋನಿನ ಮೂಲಕ 100 ಕ್ಕೆ 101ರಷ್ಟು ಪರಿಹಾರ ಶತ:ಸಿದ್ಧ